**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ**

**ಸಿಸಿ ನಂ.12/2015**

ಚಾಸಾ-11 ಫ್ರಾಸಾ-11

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 19-05-2026

| | | |
|---|---|---|
| ಹೆಸರು | : | ಈರಯ್ಯ |
| ತಂದೆಯ ಹೆಸರು | : | ಶರಣಯ್ಯ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಚಾಲಕ |
| ವಾಸಸ್ಥಳ | : | ಹಿಂಚಗೇರಾ |

-: **ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-**

ಚಾಸಾ 1 ಪರಿಚಯ. ಚಾಸಾ 12 ರಿಂದ 16 ಇವರ ಪರಿಚಯ ಇಲ್ಲ.

ನಾನು 2007 ರಿಂದ ಸ್ಥದವರೆಗೆ ರೇಣುಕಾ ಸಕ್ಕರೆ ಫ್ಯಾಕ್ಟರಿಯಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ಈ ಪ್ರಕರಣ ಕುರಿತು ಮಾಹಿತಿ ಇಲ್ಲ. ಒಂದು ದಿನಪೋಲಿಸರು ನಮ್ಮ ಫ್ಯಾಕ್ಟರಿಗೆ ಬಂದಾಗ ಸಹಿ ಮಾಡು ಅಂತ ಹೇಳಿದಕ್ಕೆ ಸಹಿ ಮಾಡಿರುತ್ತೇನೆ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸ.ಸ.ಅ. ರವರಿಂದ**

ನಮ್ಮ ಕಂಪನಿಯು ಭಾಗ್ಯವಂತಿ ಪೆಟ್ರೋಲ್ ಪಂಪ್, ಮಲ್ಲಿಕಾರ್ಜುನ ಪೆಟ್ರೋಲ್ ಪಂಪ್, ಮಹಾಂತೇಶ್ವರ ಏಜೆನ್ಸಿ ಇವುಗಳೊಂದಿಗೆ ಡೀಸ್‌ಲ್ ಕುರಿತು ಒಪ್ಪಂದ ಮಾಡಿಕೊಂಡಿದ್ದರು ಎಂದರೆ

ನನಗೆ ಗೊತ್ತಿಲ್ಲ. ನಮ್ಮ ವಹಾನಗಳನನ್ನು ಪೆಟ್ರೊಲ್ ಪಂಪ್‌ಗಳಲ್ಲಿ ಡೀಸೆಲ್ ಹಾಕಿಕೊಳ್ಳಲು ಆರೋಪಿತರ ಯಾರಾದರೂ ಒಬ್ಬರದು ಇಂಟೆಂಡ್ ಸ್ಲಿಪಗಳ ಮೇಲೆ ಸಹಿ ಬೇಕಾಗುತ್ತದೆ ಎಂದರೆ ಸರಿ. ಶಾಲಾ ವಾಹನ ಸಂಖ್ಯೆ KA 32 D 2291 ನೇದರಲ್ಲಿ ಇದ್ದ 20 ಇಂಟೆಂಡ್ ಸ್ಲಿಪಗಳು ಕಳುವಾಗಿರುತ್ತವೆ ಎಂದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ವಾಹನ ಇಂಡೆಂಟ ಸಂಃ 6040, 2040 ಅಫಜಲಪುರ ಮಹಾಂತೇಶ್ವರ ಪೆಟ್ರೋಲ ಏಜೆನ್ಸಿಯಲ್ಲಿ ಕೊಟ್ಟ ಸಹಿ ಮಾಡಿ ಡೀಸೆಲ ಪಡೆದುಕೊಂಡಿದ್ದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರು ಸದರಿ ಇಂಟೆಂಡ್ ಸ್ಲಿಪಗಳನ್ನು ದುರುಪಯೋಗ ಪಡಿಸಿಕೊಂಡು ಒಟ್ಟು 2265 ಲೀಟರನಷ್ಟು ಡೀಸೆಲನ್ನು ಸ್ವಂತಕ್ಕೆ ಬಳಸಿಕೊಂಡು ಕಂಪನಿಗೆ 1,19,051/- ಗಳಷ್ಟು ಹಣ ನಷ್ಟ ಮಾಡಿರುತ್ತಾರೆ ಎಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿ ಅಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ 11 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ **SSP, DBP** ವಕೀಲರಿಂದ :-</u>

ಪಾಟೀಸವಾಲು ಇಲ್ಲ ಎಂದು ನುಡಿಯುತ್ತಾರೆ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ